ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

4ನೇ ವರ್ಷ 31ನೇ ಸಂಚಿಕೆ ಕೊಪ್ಪ 6-4-1986 ಭಾನುವಾರ ಬೆಲೆ 40 ಪೈಸೆ

ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್-ಸಬ್ ಇನ್‌ಸ್ಪೆಕ್ಟರ್ ಹೊಡೆದಾಟ;

ಪೋಲೀಸ್ ಇಲಾಖೆಯ ಮಾನ ಬೀದಿ ಪಾಲು

ಕೊಪ್ಪ: ಇಲ್ಲಿನ ಪೋಲೀಸ್ ಠಾಣೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಯು. ವಿ. ಮುಂಡಲ್ಕರ್ ಮತ್ತು ಸಬ್ ಇನ್‌ಸ್ಪೆಕ್ಟರ್ ಟಿ. ಡಿ. ದುರ್ಗಯ್ಯ ಹೊಡೆದಾಡಿಕೊಂಡರಂತೆ ಎಂಬ ಗುಲ್ಲು ಊರೂರಿಗೆಲ್ಲ ಹಬ್ಬಿ, ಪೋಲೀಸ್ ಇಲಾಖೆಯ ಬಗ್ಗೆ ಸಾಮಾನ್ಯ ಜನ ಜಿಗುಪ್ಸೆ ಪಡುವಂತೆ ಮಾಡಿದೆ. ಇಲಾಖೆಯ ಮಾನ ಅಕ್ಷರಶಃ ಬೀದಿ ಪಾಲಾಗಿದೆ.

ಈ ಬಗ್ಗೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಶ. ಸ. ಪಾವಟೆಯವರು ಏ. 5ರಂದು ಅನಿರೀಕ್ಷಿತ ಭೇಟಿ ನೀಡಿ ತನಿಖೆ ನಡೆಸಿದ್ದು, ಚಿಕ್ಕಮಗಳೂರು ಡಿವೈಎಸ್ಪಿ ಕೆಂಪೇಗೌಡರು ವಿವರವಾದ ತನಿಖೆ ನಡೆಸಿದ್ದಾರೆ.

ಈ ಘಟನೆ ಹಾಗೂ ಇದಕ್ಕೆ ಹಿನ್ನೆಲೆಯಾದ ಕಾರಣಗಳ ಬಗ್ಗೆ 'ಮುಂಜಾವು' ನಡೆಸಿದ ವ್ಯಾಪಕ ಸಮೀಕ್ಷೆಯಲ್ಲಿ ಹಲವಾರು ಮೂಲಗಳಿಂದ ತಿಳಿದು ಬಂದ ಎಲ್ಲಾ ಸಂಗತಿಗಳನ್ನು ಇಲ್ಲಿ ಓದುಗರ ಮುಂದೆ ಇಡುತ್ತಿದ್ದೇವೆ.

ಘ ಟ ನೆ

ಏ. 3ರಂದು ನಾರ್ವೆಯ ರತ್ನಾಕರ್ ಎಂಬವರಿಂದ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ವಿಚಾರಣೆಯನ್ನು ಸಬ್ ಇನ್‌ಸ್ಪೆಕ್ಟರ್ ನಡೆಸುತ್ತಿದ್ದಾಗ ಸರ್ಕಲ್ ಇನ್‌ಸ್ಪೆಕ್ಟರ್ ಇದ್ದಕ್ಕಿದ್ದಂತೆ (ತಮ್ಮ ಚೇಂಬರಿಗೂ ಹೋಗದೆ) ಒಳಕ್ಕೆ ಬಂದು "ಯಾರನ್ನು ಅರೆಸ್ಟ್ ಮಾಡಿದ್ದೀರಿ? ಯಾಕೆ ಹೊಡೆಯುತ್ತಿದ್ದೀರಿ? ನೀವ್ಯಾರು ವಿಚಾರಣೆ ನಡೆಸಲಿಕ್ಕೆ?" ಮುಂತಾಗಿ ದೂಷಿಸುತ್ತ, ಚಂದ್ರಶೇಖರನನ್ನು ಬಿಟ್ಟು ಕಳಿಸುವಂತೆ ಆದೇಶಿಸಿದರು. ಪ್ರಕರಣ ದಾಖಲಾಗಿದೆಯೆಂದು ಹೇಳಿದರೂ ಕೇಳದೆ ಆತನನ್ನು ಎಳೆದುಕೊಂಡು ಹೋಗಲು ಯತ್ನಿಸಿದರು. "ಆಗ ಚಂದ್ರಶೇಖರನನ್ನು ಎಳೆದಾಡುವುದರಲ್ಲಿ ನಮ್ಮಿಬ್ಬರ ಮಧ್ಯೆ ಸ್ವಲ್ಪ ತಳ್ಳಾಟವಾಯಿತು, ಅಷ್ಟೇ ಹೊರತು ಉದ್ದೇಶಪೂರ್ವಕವಾಗಿ ಯಾರೂ ಯಾರ ಮೇಲೂ ಹಲ್ಲೆ ಮಾಡಲಿಲ್ಲ" ಎಂದು ದುರ್ಗಯ್ಯ ಹೇಳಿದರೆ, "ವಿನಾಕಾರಣ ಹೊಡೆಯುತ್ತಿದ್ದರು. ತಡೆಯಲು ಹೋದುದಕ್ಕೆ ಅದೇ ಕೋಲಿನಿಂದ ನನಗೂ ಎರಡು ಹೊಡೆದರು" ಎಂದು ಮುಂಡಲ್ಕರ್ ಹೇಳುತ್ತಾರೆ.

ಆಸ್ಪತ್ರೆಯಲ್ಲಿ

ಠಾಣೆಯಿಂದ ಚಂದ್ರಶೇಖರನನ್ನು ಎಳೆದುಕೊಂಡು ಹೋದ ಸರ್ಕಲ್ ಇನ್‌ಸ್ಪೆಕ್ಟರ್ ಆಸ್ಪತ್ರೆಯಲ್ಲಿ ಆತನಿಗೆ "ಚಿಕಿತ್ಸೆ" ಕೊಡಿಸಿ ಸರ್ಟಿಫಿಕೇಟ್ ಮಾಡಿಸಿದ್ದಲ್ಲದೆ ತಾವೂ "ಚಿಕಿತ್ಸೆ" ಪಡೆದರೆಂದು ಸಬ್ ಇನ್‌ಸ್ಪೆಕ್ಟರ್‌ಗೆ ತಿಳಿಯಿತು. ಇಷ್ಟೆಲ್ಲ ರಾದ್ಧಾಂತ ಮಾಡಿದ್ದಲ್ಲದೆ ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸುತ್ತಿರುವುದನ್ನು ಕಂಡು ಅವರು ತಾವೂ 'ಚಿಕಿತ್ಸೆ' ಪಡೆಯಲು ಆಸ್ಪತ್ರೆಗೆ ಹೋದರು. ಅಲ್ಲಿ ಪುನಃ ತಳ್ಳಾಟ ಮತ್ತು ಬೈದಾಟವಾಯಿತು. ಇದರಿಂದ ಕಸಿವಿಸಿಗೊಂಡ ಇಬ್ಬರು ವೈದ್ಯರುಗಳು ಆಸ್ಪತ್ರೆಯಿಂದ ಕ್ವಾರ್ಟರ್ಸಿಗೆ ಹೆಚ್ಚು ಕಮ್ಮಿ 'ಓಡಿಯೇ ಹೋದರು'

ಚಂದ್ರಶೇಖರನನ್ನು ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡ ಮುಂಡಲ್ಕರ್ ಅನಂತರ ಅವನನ್ನು ಜೀಪಿನಲ್ಲಿ ಕೂರಿಸಿಕೊಂಡು ಹರಿಹರಪುರಕ್ಕೆ ಹೊರಟು ಹೋದರು. ಅಲ್ಲಿಂದ ಆತನನ್ನು ಎಲ್ಲೆಲ್ಲಿಗೋ ಒಯ್ದು ಬಾಳೆಹೊನ್ನೂರು ಠಾಣೆಯಲ್ಲಿ ಅಡಗಿಸಿಟ್ಟು, ಚಿಕ್ಕಮಗಳೂರಿಗೂ ಒಯ್ದು ಸರ್ಟಿಫಿಕೇಟ್ ಮಾಡಿಸಿ, ಅನಂತರ ಎಸ್ಪಿಗೆ ತಮ್ಮ ಮೇಲೆ ಎಸ್ಸೈ ಹಲ್ಲೆ ಮಾಡಿದ್ದಾಗಿ ದೂರು ನೀಡಿದರು. ಅವರು ಡಿವೈಎಸ್ಪಿ ಕೆಂಪೇಗೌಡರಿಗೆ ತನಿಖೆಗೆ ಆದೇಶಿಸಿದರು. ಹೀಗೆಂದು ತಿಳಿದು ಬರುತ್ತದೆ.

ಚಂದ್ರಶೇಖರನನ್ನು 'ಎಲ್ಲೋ ಇಟ್ಟು' ಸರ್ಕಲ್ ಇನ್‌ಸ್ಪೆಕ್ಟರ್ ನಾರ್ವೆಗೆ ಬಂದು ಆತನ ತಂದೆ ರಾಮಕೃಷ್ಣಯ್ಯನನ್ನು ಉಟ್ಟ ಬಟ್ಟೆಯಲ್ಲೇ ಜೀಪಿನಲ್ಲಿ ಕೂರಿಸಿಕೊಂಡು, ಬಹುಶಃ ಚಿಕ್ಕಮಗಳೂರಿನಲ್ಲೇ ಎಸ್ಪಿಯವರನ್ನು ಕಾಣಲು, ಕರೆದೊಯ್ದರೆಂದು ಪ್ರತ್ಯಕ್ಷದರ್ಶಿ ಹೇಳಿಕೆ.

ಚಂದ್ರಶೇಖರನಿಗೆ ಒಂದೆರಡು ತೀರ ಸಾಧಾರಣವಾದ ("ವೆರಿ ಸಿಂಪಲ್") ಪೆಟ್ಟುಗಳಾಗಿದ್ದುವೇನು ಆತನಿಗೆ ಚಿಕಿತ್ಸೆ ನೀಡಿದ ವೈದ್ಯರ ಹೇಳಿಕೆ.

ಹಿನ್ನೆಲೆ ಏನಿರಬಹುದು?

ಸಬ್ ಇನ್‌ಸ್ಪೆಕ್ಟರ್ ತಮಗಿರುವ ಕಾನೂನಿನ ಚೌಕಟ್ಟಿನಲ್ಲಿ ತನಿಖೆಯೊಂದನ್ನು ನಡೆಸುತ್ತಿದ್ದಾಗ ಸರ್ಕಲ್ ಇನ್‌ಸ್ಪೆಕ್ಟರ್ ಅದರೊಳಗೆ ಅನಗತ್ಯವಾಗಿ, ಅಸಮರ್ಥನೀಯವಾಗಿ ಮಧ್ಯೆ ಪ್ರವೇಶಿಸಿದ್ದೇ ಅಸಹ್ಯಕರವಾದ, ಅಪಮಾನಕರವಾದ ಘಟನೆಗಳ ಈ ಇಡೀ ಸರಮಾಲೆಗೆ ಮೂಲಕಾರಣ, ಎಂಬುದು ಸುಸ್ಪಷ್ಟ. ಒಂದು ವೇಳೆ ಸಬ್ ಇನ್‌ಸ್ಪೆಕ್ಟರ್ ಕಾನೂನು ಮೀರಿ ವರ್ತಿಸುತ್ತಿದ್ದರೆ, ಇಬ್ಬ ಮೇಲಧಿಕಾರಿಗೆ ಅದನ್ನು ತಡೆಯುವುದು ಕಷ್ಟವಲ್ಲ. ಅವರಿಬ್ಬರಲ್ಲಿ ಸಾಮರಸ್ಯವಿಲ್ಲದಿದ್ದಲ್ಲಿ ಮಾತ್ರ ಇದು ಅಸಾಧ್ಯವಾಗುತ್ತದೆ.

ಹಾಗಾದರೆ ಈ ಪ್ರಕರಣಕ್ಕೆ ಹಿನ್ನೆಲೆಯಾಗಿ ಅವರಿಬ್ಬರಲ್ಲಿ ಸಾಮರಸ್ಯವಿಲ್ಲದಿರಲು ಕಾರಣಗಳೇನಿರಬಹುದು?

ಅಂತೋಣಿ ಸಾವಿನ ಹಗರಣ ಬಿಸಿಯಾಗಿದ್ದಾಗಲೇ ತಲಮಕ್ಕಿಯಲ್ಲಿ ವಿದ್ಯುತ್ ಹರಿಸಿದ ತಂತಿ ಬೇಲಿಗೆ ಸಿಕ್ಕಿ ದಲಿತ ಯುವತಿಯೊಬ್ಬಳು ಅಸುನೀಗಿದಳು. ಆ ಪ್ರಕರಣದಲ್ಲಿ ಆರೋಪಿಯಿಂದ ಸರ್ಕಲ್ ಇನ್‌ಸ್ಪೆಕ್ಟರ್ ಹಣ ಪಡೆದು, ಆತನನ್ನು ಕೇವಲ 5 ನಿಮಿಷದಲ್ಲಿ ಬಂಧಿಸಿದ ಶಾಸ್ತ್ರ ಮಾಡಿ ನ್ಯಾಯಾಲಯಕ್ಕೆ ಕಳಿಸಿಕೊಟ್ಟರೆಂದೂ, ಹೀಗೆ ಆರೋಪಿಗಳಿಂದ ಹಣ ಪಡೆದು ಕೇಸು ಹುಸಿಯಾಗಿಸುವುದನ್ನು ಸಬ್ ಇನ್‌ಸ್ಪೆಕ್ಟರ್ ಆಕ್ಷೇಪಿಸಿದ್ದಕ್ಕೆ ಅಲ್ಲಿಂದ ಅವರಿಬ್ಬರಲ್ಲಿ ಸಾಮರಸ್ಯ ಕುಸಿದು ಪರಸ್ಪರ ಅಪನಂಬಿಕೆ ಬೆಳೆಯಿತೆಂದೂ ಹಲವು ಮೂಲಗಳಿಂದ ಸಿಗುವ ಒಟ್ಟು ಮಾಹಿತಿಗಳಿಂದ ಹೇಳಲಾಗುತ್ತಿದೆ.

ಸಾಧುಶೆಟ್ಟಿ ಬಂಧನ

ಸೂರ್ಯದೇವಸ್ಥಾನದ ಶೀನಶೆಟ್ಟಿಯವರ ಕೊಲೆ ಪ್ರಕರಣದಲ್ಲಿ ತಲೆ ತಪ್ಪಿಸಿಕೊಂಡಿದ್ದ ಕೊಲೆ ಆರೋಪಿ ಸಾಧು ಶೆಟ್ಟಿಯನ್ನು ಅವರ ಅಣ್ಣ ಬಿ ಎನ್. ಶೆಟ್ಟಿ (ಮುಂಬಯಿಯಲ್ಲಿ ಕಂಟ್ರಾಕ್ಟರ್), ಕೆ. ವಿ. ಮಂಜುನಾಥ ಶೆಟ್ಟಿ ಮುಂತಾದ ಕೆಲವರು ಗಣ್ಯರು ಸೇರಿ, ಸರ್ಕಲ್ ಇನ್‌ಸ್ಪೆಕ್ಟರ್ ಜೊತೆ ಮೊದಲೇ ಒಪ್ಪಂದ ಮಾಡಿಕೊಂಡು, 31-3-86ರ ರಾತ್ರಿ ಎಂ. ಆರ್. ಜಡ್ 5130 ನಂಬರಿನ ಕಾರಿನಲ್ಲಿ ಕರೆತಂದು ಸರ್ಕಲ್ ಇನ್‌ಸ್ಪೆಕ್ಟರೆದುರು ಹಾಜರ್ಪಡಿಸಿ 'ಬಂಧನ' ಕ್ಕೊಳಪಡಿಸಿದರೆಂದೂ, ಆರೋಪಿಯನ್ನು 'ಪ್ರಶ್ನಿಸ' ಬಾರದೆಂದು ಸರ್ಕಲ್ ಇನ್‌ಸ್ಪೆಕ್ಟರ್-ತಮ್ಮ ಸಿಬ್ಬಂದಿಗಳಿಗೆ ಆದೇಶಿಸಿದ್ದರೆಂದೂ, ಏಪ್ರಿಲ್ 3ರಂದು ಠಾಣೆಯೊಳಗೆ ದುರ್ಗಯ್ಯ ವಿಚಾರಣೆ ನಡೆಸುತ್ತಿದ್ದುದು ಆತನನ್ನೇ ಎಂದು ತಪ್ಪಾಗಿ ಗ್ರಹಿಸಿದ ಮುಂಡಲ್ಕರ್ ಠಾಣೆಯೊಳಗೆ ಧಾವಿಸಿ ಬಂದರೆಂದೂ ಅದೇ ಉದ್ವಿಗ್ನತೆಯೇ ಮುಂದಿನ ಘಟನೆಗಳಿಗೆ ಮೂಲವಾಯಿತೆಂದೂ ಒಂದು ಸುದ್ದಿಯಿದೆ.

ಈ ಮಧ್ಯೆ ಎಲ್. ಚಂದ್ರು ಮತ್ತು ಶಂಕರಶೆಟ್ಟಿ ಅವರುಗಳು ಕೋರ್ಟಿನಲ್ಲಿ ಶರಣಾಗಿದ್ದಾರೆಂದು ಗೊತ್ತಾಗಿದೆ.

ಎಸ್ಪಿಗೆ ಮನವಿ

ಈ ಪ್ರಕರಣದ ಫಿರ್ಯಾದುದಾರರಾದ, ಮೃತ ಶೀನಶೆಟ್ಟರ ಮಗ ಶ್ಯಾಮಶೆಟ್ಟಿಯವರ ಹತ್ತಿರ, ತನ್ನ ಮುಂಚಿನ ಹೇಳಿಕೆಯನ್ನು ಬದಲಾಯಿಸಿಕೊಡಲು ಮುಂಡಲ್ಕರ್ ಒತ್ತಾಯಿಸುತ್ತಿರುವುದಾಗಿಯೂ, ಹಲ್ಲೆಯ ಪ್ರಮುಖ ಪ್ರತ್ಯಕ್ಷ ಸಾಕ್ಷಿಯಾದ ನರಸ ಪೂಜಾರಿಯವರ ಹೇಳಿಕೆಯನ್ನು ದಾಖಲು ಮಾಡುವಾಗ 'ಹೊಡೆದದ್ದು ಯಾರೆಂದು ನನಗೆ ಗೊತ್ತಿಲ್ಲ' ಎಂದು ಮುಂಡಲ್ಕರ್ ದಾಖಲಿಸಿಕೊಂಡಿದ್ದಾರೆಂದೂ ಶ್ಯಾಮ ಶೆಟ್ಟಿ ಕೊಪ್ಪಕ್ಕೆ ಏ. 5ರಂದು ಭೇಟಿ ಕೊಟ್ಟಿದ್ದ ಎಸ್ಪಿಯವರನ್ನು ಕಂಡು ದೂರಿರುವುದಾಗಿ ತಿಳಿದು ಬಂದಿದೆ.

ಅಂದು ಎಸ್ಪಿಯವರನ್ನು ಕಾಣಲು ಮಂಜುನಾಥ ಶೆಟ್ಟಿ, ಶೀನ ಭಂಡಾರಿ ಮತ್ತಿತರ ಮುಖಂಡರು, ಪ್ರವಾಸಿ ಮಂದಿರದಲ್ಲಿ ... ದಿದ್ದು, ಎಲ್ಲರ ಪರವಾಗಿ ಅಧ್ಯಕ್ಷರೊಬ್ಬ... ಭೇಟಿ ಮಾಡಿದರೆನ್ನಲಾಗಿದೆ. ಉಪಾಧ್ಯ... ನಾರಾಯಣ ಭಟ್, ಸ್ವಾಮಿ, ಇತ್ಯಾ... ನಾರಾಯಣ್ ಮತ್ತು ಬಹುಶಃ ಮಹಿ... ಸದಸ್ಯರು ಅಲ್ಲಿಗೆ ಹೋಗಿರಲಿಲ್ಲವೆನ್ನಲಾಗಿ...

ಹಾಗೆಯೇ ಸೂರ್ಯದೇವಸ್ಥಾನದ ಕ... ಯ ಹಲವರು, ವಾಸಪ್ಪಗೌಡ, ಕಾಡ... ಗೌಡ ಮತ್ತು ಹಲವು ಜನತಾ ಕಾರ್ಯಕರ್ತರೂ ಸಹ ಎಸ್ಪಿಯವರನ್ನು ಕಾಣಲು ಹೋಗಿದ್ದರೆಂದು ಗೊತ್ತಾಗಿದೆ.

ಉದ್ವಿಗ್ನತೆಯ ಅಗ್ನಿಪರ್ವತ

ಕಳೆದೊಂದು ವರ್ಷದಿಂದೀಚೆಗೆ ಕೊಪ್ಪ... ಉದ್ವಿಗ್ನತೆಯ ಅಗ್ನಿಪರ್ವತದ ಮೇಲೆ ಕು...ತಿದೆ. ಈಗಾಗಲೇ ಎರಡು ಬಾರಿ ಅದು ಸ್ಫೋಟಿಸಿಯೂ ಆಗಿದೆ. ಆದರೆ ಆಗೆಲ್ಲ ಪೋಲೀಸರು ಬಿಗಿ ಕ್ರಮ ಅನುಸರಿಸಿದ್ದರಿಂದ ಹೆಚ್ಚಿ... ಅನಾಹುತಗಳಾಗಿಲ್ಲ.

ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿದಾ... ಆಯಾ ಸಂದರ್ಭದಲ್ಲಿ ಈ ಆಸ್ಫೋಟಕ್ಕೆ ನಿಮಿತ್ತ ಯಾರೇ ಆಗಿದ್ದರೂ ಮೂಲ ಕಾರಣವೆಂದರೆ ಇದು: ಕಾನೂನು, ಶಿಸ್ತು, ನ್ಯಾಯ-ನೀತಿಗಳ ಅಂಕೆಗೊಳಪಟ್ಟು ಬದುಕುವ ಸಾಮಾನ್ಯ ಸತ್ಪ್ರಜೆಗಳಿಗೂ, ಈ ಯಾವುದೇ ಅಂಕೆಗೂ ಒಳಪಡದೆ ಸ್ವೇಚ್ಛೆಯಾ... ಲೂಟಿಯಾಡಿಕೊಂಡಿರಬೇಕೆನ್ನುವ ಸಮಾ... ವಿರೋಧಿ ಶಕ್ತಿಗಳಿಗೂ ನಡುವಣ ಸಂಘರ್ಷವೆಂಬುದು ಅರಿವಾಗುತ್ತದೆ. ಕಳೆದೊಂದು ವರ್ಷದ ಯಾವುದೇ ಪ್ರಮುಖ ಘಟನೆಯನ್ನೂ ಈ ವಿಶ್ಲೇಷಣೆಯ ಬೆಳಕಿಗೊ... ಪರೀಕ್ಷಿಸಬಹುದು.

ಈ ಸಂಘರ್ಷದಲ್ಲಿ ಆಗೀಗ ಸ್ವೇಚ್ಛಾಶಕ್ತಿಗಳ ಕೈ ಮೇಲಾಗುತ್ತಿದ್ದು, ಪೋಲೀಸ್ ವ್ಯವಸ್ಥೆಯೇನಾದರೂ ಕುಸಿದಲ್ಲಿ ಈ ಶ... ಗಳೇ ಮೇಲುಗೈ ಪಡೆದು, ಅದರಿಂದ ನುಜ್ಜುಗುಜ್ಜಾಗುವ ಊರನ್ನು ಹಾಗೂ ಪರಿಸ್ಥಿತಿಯನ್ನು ಮತ್ತೆ ಸರಿಪಡಿಸಲು ಬಹಳ ಶ್ರಮ ಬೇಕಾಗುತ್ತದೆ.

ಇಂಥ ದುರದೃಷ್ಟಕರ ಘಟನೆಗಳಾದರೂ ಪದೇ ಪದೇ ಜರುಗಿ, ಸ್ವೇಚ್ಛಾ ಶಕ್ತಿಗಳು ಅವನ್ನು 'ಸದುಪಯೋಗ' ಪಡಿಸಿಕೊಂಡು ಪೋಲೀಸ್ ಇಲಾಖೆಯನ್ನು ಅಪಖ್ಯಾತಿಗೊಳಿಸಿ ಮಣ್ಣು ಮುಕ್ಕಿಸಲು ಶ್ರಮಿಸುತ್ತಿ... ಕಳೆದ ವರ್ಷದಿಂದ ಈಚಿನವರೆಗಿನ ... ಪ್ರಮುಖ ಘಟನೆಗಳಲ್ಲೂ ಪೋಲೀಸ್ **ಇಲಾಖೆಯೊಳಗಿನಿಂದ** ಸಿಕ್ಕ ಕುಮ್ಮಕ್ಕು ಒಂದು ಮುಖ್ಯ ಪಾತ್ರ ವಹಿಸಿದೆ ಎಂಬುದು ಗುಟ್ಟೇನಲ್ಲ.

ಈ ನಾಲ್ಕೈದು ವರ್ಷಗಳಲ್ಲಿ ಈ ಕ್ಷೇತ್ರದ ಎಲ್ಲ ಠಾಣೆಗಳಿಗೂ – ಒಂದೆರಡು ... ರನ್ನು ಹೊರತುಪಡಿಸಿ — ಒಳ್ಳೊಳ್ಳೆ... ಬಹಳ ದಕ್ಷ ಮತ್ತು ನಿಷ್ಠಾವಂತರಾ... **ಲಂಚ ಕೂಡ ತೆಗೆದುಕೊಳ್ಳದ !** ... ಇನ್‌ಸ್ಪೆಕ್ಟರುಗಳು ಬಂದಿದ್ದಾರೆ. ಆದರೆ ... ರ ದಕ್ಷತೆಗೆ ಸ್ಫೂರ್ತಿಯಾಗಬಲ್ಲ ಆ ಮಟ್ಟ... ಒಬ್ಬ ಸರ್ಕಲ್ ಇನ್‌ಸ್ಪೆಕ್ಟರನ್ನು ಕಾ... ಬಹಳ ಕಾಲವಾಗಿದೆ.

ಮುಂಡಲ್ಕರ್ ಆದರೂ ಹೀಗೆ ಹ... ಸುಳಿಯೊಳಗೆ ಸಿಲುಕಿಕೊಳ್ಳುವವರೆಗೆ ... ಯ ರೀತಿಯಲ್ಲೇ ಕೆಲಸ ಮಾಡಿ ಒಳ್ಳೆ... ಹೆಸರನ್ನೂ (ಸ್ವೇಚ್ಛಾಶಕ್ತಿಗಳಿಂದ ತೀ... ವಾದ ಅಪಖ್ಯಾತಿಯನ್ನೂ) ಗ... ಆದರೆ ಫೆ. 20ರಂದು ಠಾಣೆಯ... ಗಲಾಟೆಯ ವೇಳೆ ಅವರ ತ... ಲಿಗೆ ಬಂತು. ಈಗ ಅದು ಮತ್ತ... ಜ್ವಲವಾಗಿದೆ.

(4ನೇ ಪು...

ವೇದಿಕೆ

ಕಿಗ್ಗ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನ : ಓದುಗರ ಅಭಿಪ್ರಾಯಗಳು

(30.3.86ರ 'ವೇದಿಕೆ' ಅಂಕಣ ಎತ್ತಿದ ಚರ್ಚೆಗೆ ಸಂವಾದ)

1. ಸಹಪಂಕ್ತಿ ಭೋಜನ ಆರಂಭವಾಗಲಿ

ಮಾನ್ಯರೆ,

ಕಿಗ್ಗ ದೇವಸ್ಥಾನದಲ್ಲಿ ದೇವತಾ ಕಾರ್ಯಗಳೆಂದು ಸಹ ಪಂಕ್ತಿ ಭೋಜನ ಕುರಿತು ನಿಮ್ಮ 30.3.86 ರ ಪತ್ರಿಕೆಯಲ್ಲಿ ಎತ್ತಿರುವ ಚರ್ಚೆಯ ಸಂಬಂಧವಾಗಿ ನನ್ನದೊಂದು ಅಭಿಪ್ರಾಯ ತಿಳಿಸಲು ಇಚ್ಛಿಸುತ್ತೇನೆ.

ಇದೇ ಕಿಗ್ಗ ದೇವಸ್ಥಾನದ ಸಂಬಂಧದಲ್ಲಿ ಹಿಂದೆ ಶ್ರೀ ಚಂದ್ರಮೌಳಿರಾಯರ ಕಾಲದಲ್ಲಿ ನಾನು ಅವರ ಮಾರ್ಗದರ್ಶನದಲ್ಲೂ ನಂತರ ಶ್ರೀ ಶ್ರೀಕಂಠರಾಯರ ಜೊತೆಯಲ್ಲಿಯೂ ಹಾಗೂ ಈಗ ಶ್ರೀ ಶಿವಶಂಕರರಾವ್ ಜೊತೆಯಲ್ಲಿಯೂ ಸಹ ಇದ್ದು ನನ್ನಿಂದ ಆಗುವಷ್ಟು ಧರ್ಮ ಕಾರ್ಯಗಳಲ್ಲಿ ಭಾಗಿ ಆಗಿ ಸಹಕರಿಸುತ್ತಾ ಬಂದಿದ್ದೇನೆ. ಮುಂದೂ ಸಹ ಸದ್ರಿ ದೇವಸ್ಥಾನದಲ್ಲಿ ನಡೆಸುವ ಧರ್ಮ ಕಾರ್ಯಕ್ಕೆ ದುಡಿಯಲು ಶಕ್ತನಾಗಿದ್ದು, ನಮ್ಮ ವಂಶಪಾರಂಪರ್ಯದಲ್ಲೂ ಸಹ ದೇವರ ಕಾರ್ಯಕ್ಕೆ ಭಾಗಿಗಳಾಗಿ ದುಡಿಯುತ್ತೇವೆ.

ಸದ್ರಿ ದೇವಸ್ಥಾನದಲ್ಲಿ ವಿಶೇಷ ಹೋಮಾದಿಗಳು ನಡೆದ ಇಂಥ ಸಂದರ್ಭಗಳಲ್ಲಿ, ದೇವಸ್ಥಾನದ ಒಳಗಡೆ ಋತ್ವಿಜರಿಗೆ ಮಾತ್ರ ಊಟ, ಉಪಚಾರಗಳಿಗೆ ಅವಕಾಶ ಕೊಟ್ಟು, ಉಳಿದ ಬ್ರಾಹ್ಮಣರೆಲ್ಲರೂ ಹೊರಗಡೆ ಹಾಲಿನಲ್ಲಿ ಮತ್ತು ಹೊರಗೆ ಚಪ್ಪರ ಹಾಕಿಸಿ, ಸಾಮೂಹಿಕವಾಗಿ ಊಟಕ್ಕೆ ಏರ್ಪಾಡನ್ನು ಮಾಡಿಸುವಂತೆ ಕನ್ವೀನರು, ಎಲ್ಲಾ ಧರ್ಮದರ್ಶಿಗಳು ಸಹ ಒಪ್ಪಿ ಸಹಕರಿಸಿ ಸದ್ರಿ ದೇವಸ್ಥಾನದ ವಿಶೇಷ ಕಾರ್ಯದ ಬಗ್ಗೆ ಯಾವತ್ತೂ ನಿಂದಾಸ್ಪದ ವಿಘ್ನಗಳು ಬಾರದಂತೆ ದಾರಿ ತೋರಿಸಲು ಅವಕಾಶ ಕಲ್ಪಿಸಿಕೊಡಬೇಕೆಂಬುದಾಗಿ ನನ್ನ ಅನಿಸಿಕೆಯನ್ನು ಈ ಮೂಲಕ ತಿಳಿಯಪಡಿಸುತ್ತೇನೆ.

—ಹೆಚ್.ಆರ್. ಶೀನಪ್ಪ ನಾಯಕ್,
ಶಾನುವಳ್ಳಿ.

2. ಪಂಕ್ತಿ ತಾರತಮ್ಯ ಅಧರ್ಮೀಯ, ಅಮಾನವೀಯ

ಮಾನ್ಯರೇ,

ಹಿಂದೂ ಧರ್ಮ ಮತ್ತೆ ಇಂದು ಕವಲು ದಾರಿಯಲ್ಲಿ ನಿಂತಿದೆ. ಒಂದು ಕಡೆಯಿಂದ ಹಿಂದಾದ ಶೋಷಣೆ, ಅನ್ಯಾಯಗಳನ್ನು ಸ್ವಲ್ಪವಾದರೂ ಒಪ್ಪಿಕೊಳ್ಳುತ್ತಾ, ಅದನ್ನು ಹೋಗಲಾಡಿಸಿ ಧರ್ಮಕ್ಕೆ ಹೊಸ ರೂಪ, ಆಯಾಮ ತರುವ ಬಗ್ಗೆ ದೀರ್ಘವಾಗಿ ಮಾತಾಡುತ್ತಾ, 'ಹಿಂದೂಗಳೆಲ್ಲರೂ ಒಂದೇ'– ಎನ್ನುತ್ತಾ ತಿರುಗಾಡುವ ಪ್ರಗತಿಪರ (!) ಧರ್ಮ ಸುಧಾರಕರು, ಮಠಾಧೀಶರುಗಳು; ಇನ್ನೊಂದೆಡೆ ಏನೇ ಆದರೂ ತಮ್ಮ ಹುಟ್ಟಿನ ಶ್ರೇಷ್ಠತೆಯನ್ನು, ಪುರೋಹಿತಶಾಹಿಯನ್ನು, ತಮ್ಮದಾಗಿಸಿಕೊಂಡಿರುವ ಸಾಮಾಜಿಕ ಉನ್ನತ ಸ್ಥಾನವನ್ನು ಬಿಟ್ಟುಕೊಡಲು ಸಿದ್ಧರಿಲ್ಲದ, ವರ್ಣಾಶ್ರಮವನ್ನು ಚಾಚೂ ತಪ್ಪದೆ ಪ್ರತಿಪಾದಿಸುವ, ತಮ್ಮಂತೆಯೇ ರಕ್ತ ಮಾಂಸದ ಮುದ್ದೆಯಾದ ಇನ್ನೊಬ್ಬನನ್ನು ತುಚ್ಛವಾಗಿ ಕಾಣುವ, ಅವನೊಡನೆ ಸಹಪಂಕ್ತಿಯಲ್ಲಿ ಉಣ್ಣಲಾರದ ಮೇಲರಿಮೆ (Superiority Complex) ಹೊಂದಿರುವ ಮೇಲ್ವರ್ಗದ ಜನರು, ಅದಕ್ಕೆ ಕುಮ್ಮಕ್ಕು ನೀಡುವ ಸಮಯಸಾಧಕರು, ಮರಿ ಪುಢಾರಿಗಳು.

ಈ ನೆಲೆಯಲ್ಲಿ ನಿಮ್ಮ ಪತ್ರಿಕೆಯಲ್ಲಿ ಕಿಗ್ಗ ದೇವಸ್ಥಾನದಲ್ಲಿ ಸಹ ಪಂಕ್ತಿ ಭೋಜನಕ್ಕೆ ಆಗ್ರಹ ಕುರಿತ ವಿವೇಚನೆ 'ವೇದಿಕೆ'ಯೇರಿದ್ದು ಸ್ವಾಗತಾರ್ಹ. ಇದಕ್ಕೆ ಸಂಬಂಧಪಟ್ಟಂತೆ ಹಲವರ ಅಭಿಪ್ರಾಯ, ವಿಶೇಷವಾಗಿ ಕಿಗ್ಗ ದೇವಾಲಯದ ಕನ್ವೀನರ್ ಶ್ರೀ ಕೆ.ಸಿ. ಶಿವಶಂಕರರಾವ್ ಇವರ ಮಾರ್ಮಿಕ ಮಾತುಗಳಿಗೆ ಪ್ರತಿಕ್ರಿಯಿಸದಿದ್ದಲ್ಲಿ ನಮ್ಮ ವಿದ್ಯೆ, ತಿಳುವಳಿಕೆಗಳಿಗೆ ಅಪಚಾರವೆಸಗಿದಂತೆನ್ನಿಸಿದ್ದರಿಂದ ಇದನ್ನು ಬರೆಯಲೇಬೇಕಾಗಿದೆ.

ವ್ಯಕ್ತಿಯ ಶುದ್ಧತೆಯನ್ನಳೆಯಲು ಶ್ರೀ ಶಿವಶಂಕರರಾವ್‌ರವರು ಬಳಸಿರುವ ಮಾಪಕವನ್ನು ನೋಡಿ ದಿಗ್ಭ್ರಮೆಯಾಯಿತು ಹಾಗೂ ನಾಚಿಕೆಯೆನಿಸಿತು. ಶತಮಾನಗಳ ಹಿಂದೆ ಬಸವಣ್ಣ, ಪುರಂದರ, ಕನಕದಾಸರಿಗೆ ಗೋಚರಿಸಿದ ಸತ್ಯ—ವ್ಯಕ್ತಿಯ ಅಂತರ್ಯದ ಶುದ್ಧತೆ, ಪಾವಿತ್ರ್ಯ— 21ನೇ ಶತಮಾನಕ್ಕೆ ಕಾಲಿಡಲಿರುವವರಿಗೆ ತಿಳಿಯದಿರುವುದು ತುಂಬಾ ಶೋಚನೀಯ ಅವರಿಗೆ ಹಾಗೂ ಅವರ ಅಭಿಪ್ರಾಯವನ್ನು ಅನುಮೋದಿಸುವ ಎಲ್ಲರಿಗೆ ತಮ್ಮ ಪೂರ್ವಗ್ರಹವನ್ನು ತೊರೆದು ಈ ವಿಷಯವನ್ನು ಆಲೋಚಿಸುವಂತೆ ಸಲಹೆ ನೀಡುವುದು ನಮ್ಮ ಕರ್ತವ್ಯ. ಈ ಮುಂದಿನ ಹಲವು ಪ್ರಶ್ನೆಗಳಿಗೆ ಅವರು ಪ್ರಾಮಾಣಿಕವಾಗಿ, ಭಾರತದ ಜಾತ್ಯಾತೀತ ನಿಲುವಿನ ನೆಲೆಗಟ್ಟಿನಲ್ಲಿ [Secular India] ಹಾಗೂ ಮಾನವೀಯತೆಯ ತಳಹದಿಯಲ್ಲಿ [Burns ನ Man's inhumanity to man makes countless thousands suffer] ಉತ್ತರಿಸಲು ಸಾಧ್ಯವೇ?

ದೇವರು, ಧರ್ಮ, ಸ್ನಾನ, ಭಕ್ತಿ

1. ಮನಸ್ಸಿನ ಕೊಳೆ ಕಳೆದುಕೊಳ್ಳುವ ಅಂತರಂಗದ ಶುದ್ಧತೆಗಿಂತ ಮೈಯ ಕೊಳೆ ತೆಗೆಯುವ ಸ್ನಾನವೇ ದೇವರಿಗೆ ಹೆಚ್ಚು ಪ್ರಿಯವಾದುದೆಂದು ನೀವು ನಂಬಿದ್ದೀರಾ? [ಹೌದಾದಲ್ಲಿ ಬಸವಣ್ಣ, ಪುರಂದರ, ಕನಕ, ಅಕ್ಕಮಹಾದೇವಿಯವರು ನುಡಿದದ್ದೆಲ್ಲಾ ಅಸತ್ಯವೆಂದು ಒಪ್ಪಿಕೊಳ್ಳುತ್ತೀರಾ?]

2) ಒಬ್ಬ ಸತ್ಪ್ರಜೆಯಾಗಿ ನಿಮಗೆ ಭಾರತದ ಸಂವಿಧಾನದಲ್ಲಿ ನಂಬಿಕೆಯಿದೆಯೆ? [ಇದೆಯಾದಲ್ಲಿ ಮುಜರಾಯಿ ದೇವಸ್ಥಾನ ಒಂದಕ್ಕೆ ಇಬ್ಬಗೆಯ ನೀತಿ ಅನುಸರಿಸುತ್ತಿರುವುದು, ಸಹ ಪಂಕ್ತಿ ಭೋಜನ ನಿರಾಕರಿಸುವುದು ಭಾರತದ ಜಾತ್ಯಾತೀತ ಸಂವಿಧಾನಕ್ಕೆ ಪರೋಕ್ಷವಾಗಿಯಾದರೂ ನಿರ್ಲಕ್ಷ್ಯ ತೋರಿದಂತಾಗುವುದಿಲ್ಲವೆ?]

3) ಹಿಂದೂ ಧರ್ಮದ ಉದ್ಧಾರದ ಬಗ್ಗೆ, ಬೆಳವಣಿಗೆಯ ಬಗ್ಗೆ ನಿಮಗೆ ಒಲವಿದೆಯೆ? ಇದೇ ಧರ್ಮದೊಳಗೆ ಬೃಹು ಸಂಖ್ಯಾ ವರ್ಗಕ್ಕೆ ಅಮಾನವೀಯತೆ ತೋರುವವರಿಗೆ, ಶೋಷಣೆ ನಡೆಸುವವರಿಗೆ, ಒಟ್ಟಿಗೆ ಕುಳಿತು ಉಣ್ಣಲೂ ಹಿಂಸೆ ಪಡುವವರಿಗೆ– ಮತಾಂತರವನ್ನು ವಿರೋಧಿಸುವ, ಪೋಪ್ ಭೇಟಿಗೆ ಬಣ್ಣ ಕಟ್ಟುವ, ಇತರ ಧರ್ಮದ ಬಗ್ಗೆ ನಂಜು ಕಾರುವ ನೈತಿಕ ಹಕ್ಕಿದೆಯೆ? [ನಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿರುವಾಗ ಪಕ್ಕದವನ....?] ಈ ಧರ್ಮದ ಉದ್ಧಾರಕ್ಕೆ ಕೊಡಗಲು ಅಂತಹವರಿಗೆ ಯಾವ ನೈತಿಕ ನೆಲೆಗಟ್ಟಿದೆ?

4) ಋತ್ವಿಜರೇ ಆಗಲಿ, ಇನ್ಯಾರೇ ಆಗಲಿ– ನಿಷ್ಕಲ್ಮಶ ಭಕ್ತಿಯಿಂದ ಶ್ರೇಷ್ಠರಾಗಬೇಕೇ ಹೊರತು ಹುಟ್ಟಿನಿಂದಲ್ಲ ಎಂಬ ಸತ್ಯ ನಿಮಗೆ ಒಪ್ಪಿಗೆಯಾಗದೆ? ದೇವಾಲಯ ಕಟ್ಟಲು, ನಿಮ್ಮ ಮನೆ ಕಟ್ಟಲು ಯೋಗ್ಯತೆ ಉಳ್ಳವರು ಅದನ್ನು ಪ್ರವೇಶಿಸಲು, ನಿಮ್ಮೊಡನೆ ಉಣ್ಣಲು ಹೇಗೆ ಅಯೋಗ್ಯರಾಗುತ್ತಾರೆ?

5) ಇನ್ನು ಕೊನೆಯದಾಗಿ ಮಾನವೀಯತೆಯ ನೆಲೆಗಟ್ಟಿನಲ್ಲಿ– ದಿನ ನಿತ್ಯ ನೀವು ನೋಡುವ ಮಾತನಾಡುವ, ದೈಹಿಕವಾಗಿ ನಿಮ್ಮಂತೆಯೇ ಇರುವ, ಪ್ರಾಣಿ ಶಾಸ್ತ್ರದ ಪ್ರಕಾರ ಒಂದೇ ಹೆಸರಿನಿಂದ ಕರೆಯಲ್ಪಡುವ ಮಾನವನನ್ನು ನಿಮ್ಮಂತೆಯೇ ಎಂದು ಒಪ್ಪಿಕೊಳ್ಳದಿರಲು, ಅವರಿಗಿಂತ ನೀವು ಶ್ರೇಷ್ಠರು ಎಂದುಕೊಳ್ಳಲು ನಿಮ್ಮ ವಿವೇಕ, ಬುದ್ಧಿ ಒಪ್ಪುತ್ತದೆಯೆ? ಈ Superiority Complexನ ಬಗ್ಗೆ ನಿಮಗೆ ನಾಚಿಕೆಯೆನಿಸುವುದಿಲ್ಲವೆ? ಈ ಪ್ರಪಂಚದಲ್ಲಿ

(3ನೇ ಪುಟಕ್ಕೆ)

ಪರಿಚಯ

ಎಲೆ ಮರೆಯ ಮಲೆನಾಡ ಕವಿ ಜಯಪುರ ಕೃಷ್ಣಪ್ಪಗೌಡ

ನಿಸರ್ಗದ ತವರೂರಾದ, ಮಹಾನ್ ಕವಿಗಳ, ಕಥೆಗಾರರ, ಕಲೆಗಾರರ ಬೀಡಾದ ಹಾಗೂ ಸಂಸ್ಕೃತಿಗೆ ಹೆಸರಾದ ಮಲೆನಾಡಿನ ಮೂಲೆಯಲ್ಲಿ, ಎಲೆಯ ಮರೆಯ ಕಾಯಿಯಂತೆ ಇರುವ ಕವಿಯೊಬ್ಬರನ್ನು ಪ್ರಿಯ ಓದುಗರಿಗೆ ಇಲ್ಲಿ ಪರಿಚಯಿಸಿಕೊಡುತ್ತಿದ್ದೇನೆ

ಶ್ರೀಯುತ ಕೃಷ್ಣಪ್ಪ ಗೌಡರು ಕೊಪ್ಪ ತಾಲ್ಲೂಕ್, ಜಯಪುರದ ಗ್ರಾಮ ಒಂದರಲ್ಲಿ ಜನಿಸಿದರು. ಹಳ್ಳಿಯಲ್ಲೇ ಬೆಳೆದು, ಹಳ್ಳಿಯಲ್ಲೇ ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ತಮ್ಮ 25ರ ಹರೆಯದಲ್ಲಿ ರಾಜಕೀಯಕ್ಕೆ ಪಾದಾರ್ಪಣ ಮಾಡಿದರು. ಆದರೆ ರಾಜಕೀಯದಲ್ಲಿ ಬೇಸತ್ತು ಇವರು ಮರದ ವ್ಯಾಪಾರ ಆರಂಭಿಸಿದರು

ಅಂದಿನಿಂದಲೂ ಇವರಿಗೆ, ಸಮಯವಿದ್ದಾಗ ಕವಿತೆಗಳನ್ನು ಬರೆಯುವ ಹವ್ಯಾಸ ಅಂಟಿಕೊಂಡಿತ್ತು. ಅವುಗಳನ್ನು ಪ್ರಕಟಿಸಲು ಬಹಳ ಪ್ರಯತ್ನಿಸಿದರಾದರೂ ಅದು ಸಾಧ್ಯವಾಗದೆ ಅವೆಲ್ಲ ಪೆಟ್ಟಿಗೆಯಲ್ಲೇ ಉಳಿದುಕೊಂಡವು. ಅಷ್ಟರಲ್ಲೇ ಅವರನ್ನು ಮುಪ್ಪು ಆವರಿಸಿ ಅಲ್ಲಿಂದ ಅವುಗಳನ್ನು ಪ್ರಕಟಗೊಳಿಸುವ ಗೋಜಿಗೆ ಹೋಗದೆ, ತನ್ನಷ್ಟಕ್ಕೆ ತಾನೇ ಕವನಗಳನ್ನು ಬರೆದು ಪೆಟ್ಟಿಗೆಯಲ್ಲಿ ಇಡಲಾರಂಭಿಸಿದರು.

ಇವರ ಕವನಗಳು ಹೆಚ್ಚಾಗಿ ಮಲೆನಾಡ ಸೌಂದರ್ಯ, ಕಲೆ ಹಾಗೂ ಸಂಸ್ಕೃತಿಯನ್ನು ವರ್ಣಿಸುವಂತಹವಾಗಿವೆ.

(4ನೇ ಪುಟಕ್ಕೆ)

ಪದ್ಯ ದಂಕಣ

ವಿ ಪ ರ್ಯಾ ಸ

ನಮ್ಮಂತಹ ಪ್ರಬುದ್ಧ ಕವಿಗಳೇ ಹೀಗೆ !
ಬರೆಯಲು ಕುಳಿತರೆ ಬರೇ
ಪ್ರೇಮ,, ಗೀಮ, ಕಾಮಗಳೇ
ತಲೆಯಿಂದ ಹೊರಬಿದ್ದು
ಲೇಖನಿಯ ಬಿಂದುಗಳಾಗುವವು.

ಭೀಕರ ಬರವನು ನೋಡಿಯೂ
ನೋಡದ ನಮ್ಮಂಥ ಕವಿಗಳು
ಬಸಿರುಟ್ಟ ಗುಡಿಸಲಲ್ಲಿ ಹಸಿರಿಟ್ಟು ಒಣಗಿ
ಮುರುಟಿ ಹೋಗುತ್ತಿರುವ ಎನ್ನಪ್ಪನ
ಕಣ್ಣಾಲಿಯಲಿ ಒಣಗದ ನೀರನ್ನೇ
ಕಾವ್ಯಮಯವೆನ್ನುವರು.

ಬೆಂಜಮಿನ್ (ಮೊಲಾಯಿಸ್) ಸತ್ತಾಗ
ಅಯ್ಯೋ! ಕವಿಯೊಬ್ಬ ಸತ್ತನೆನ್ನುವ ನಾವು
ಅವನ ಸ್ವಾತಂತ್ರ್ಯವಾದವನ್ನೇ
ಹಿಡಿಮುಷ್ಟಿ ಮಾಡಿ ಅವನ ಹೆಸರನ್ನೇ
ಅಳಿಸುವ ನಮ್ಮಂತಹ ಕವಿಗಳು,

ಹಸಿದು ಬೆಂಡಾದ ಬಡ ಕಂಗಳನ್ನು
ನೋಡಿ 'ಬುದ್ಧಿಜೀವಿಗಳಂತೆ' ಎನ್ನುವ
ನಾವು

ಲೇಖನಿಯ ತುಕ್ಕು ಹಿಡಿಸುತ್ತಾ, ಹರುಕು
ದಾಡಿಯ ಬಿಟ್ಟು, ಬಗಲು ಚೀಲವೇರಿಸಿ
ಊರೂರು ಅಲೆಯುತ್ತ, ನಾವೇ
ದೊಡ್ಡವರೆಂದು

ಪ್ರೀತಿ, ಪ್ರೇಮಗಳೆಂಬ ಹಳಸಲು
ಶಬ್ದಗಳ ಬಳಸುವ ನಮಗೆ
ಬೇರೆ ವಿಷಯವೇ ಇಲ್ಲವಲ್ಲ!

—ಎಂ. ಕೆ. ಹರೀಶ್ ಕಡಕಾರು.

ವೇದಿಕೆ

ಕಿಗ್ಗ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನ: ಓದುಗರ ಅಭಿಪ್ರಾಯಗಳು

3. ದೇವರಿಗಿಲ್ಲದ ಜಾತಿ-ಮತ ಭೇದ ದೇವರ ಪ್ರಸಾದಕ್ಕೆ ಬೇಕೆ?

ಈಗಿನ ನಮ್ಮ ಸಮಾಜದ, ಅದರಲ್ಲೂ ಹಿಂದೂ ಸಮಾಜದ, ಜಾತಿ–ಮತ ವಿಂಗಡಣೆಯ ಸಮಸ್ಯೆಗೆ ಜನರ ನೀತಿ–ನಡವಳಿಕೆಗಳೇ ಕಾರಣವೆಂಬುದು ಸ್ಪಷ್ಟ. ಆದರೆ ಒಮ್ಮೆಲೇ ಇದರ ನಿವಾರಣೆ ಅಸಾಧ್ಯ. ನಿಧಾನವಾಗಿ ಜಾಗೃತಿ ಮನೋಭಾವದ ಜನಸಾಮಾನ್ಯರು ತಮ್ಮ ವಿಚಾರ–ಅನಿಸಿಕೆಗಳನ್ನು ಪರಸ್ಪರ ಹಂಚಿಕೊಂಡು ಸಂಯುಕ್ತವಾಗಿ ಅದಕ್ಕೊಂದು ಪರಿಹಾರ ಮಾರ್ಗವನ್ನು ರೂಪಿಸಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಎಲ್ಲರಿಗೂ ಗೊತ್ತಿರುವಂತೆ ಕಿಗ್ಗದ ದೇವರು ಜಾತಿ–ಮತ ಭೇದವಿಲ್ಲದ ಎಲ್ಲಾ ಹಿಂದುಗಳ ದೇವರು. ಈ ನಿಟ್ಟಿನಲ್ಲಿ ಪುನಃ ಜಾತೀಯತೆಯ ಬೀಜ ಮೊಳಕೆಯೊಡೆಯುತ್ತಿರುವುದು ಖಂಡನೀಯ. ಈ ದೇವಸ್ಥಾನದ ಉತ್ಸವಾದಿಗಳಲ್ಲಿ ಬ್ರಾಹ್ಮಣರಂತೆ ಇತರೇತರರೂ ತಮ್ಮ ಕಾಣಿಕೆ, ಸಹಾಯ, ಸಹಕಾರ ನೀಡುವುದರಿಂದ ಅವರಿಗೂ ಉತ್ಸವಗಳಲ್ಲಿ ಸಹಭಾಗಿತ್ವ ಅತ್ಯವಶ್ಯ. ಹೀಗಿದ್ದೂ, ದೇವರ ಪ್ರಸಾದವೆನಿಸಿರುವ ಭೋಜನ ಪಡೆಯುವುದರಲ್ಲಿ ತಾರತಮ್ಯ ಏಕೆ?

ಇಂಥ ಸಾರ್ವಜನಿಕ ಸಮಾರಂಭಗಳಲ್ಲಿ ಸಂಕುಚಿತ ಮನೋಭಾವ ತೋರುವುದು ಅರ್ಥಹೀನ. ಇಂದು ಸಮಾಜದಲ್ಲಿಯಾರೇ ಆದರೂ ತಮ್ಮ ಸ್ಥಾನವನ್ನು ನಡವಳಿಕೆಗಳಿಂದ ಉಳಿಸಿಕೊಳ್ಳಬೇಕೇ ಹೊರತು ಹುಟ್ಟಿನಿಂದಲ್ಲ. ಇದನ್ನು ಎಲ್ಲ ಬ್ರಾಹ್ಮಣರೆನ್ನಿಸಿಕೊಂಡಿರುವವರು ಅರಿಯುವುದು ಸೂಕ್ತ. ಅದರಂತೆ ಬ್ರಾಹ್ಮಣೇತರರೂ ಬುದ್ಧಿಯನ್ನು ಕೈಗೆ ಕೊಡದೆ ಸಂಯಮ ತೋರುವುದು ಅಗತ್ಯ. ಈ ಸಮಸ್ಯೆ ಇತ್ಯರ್ಥಕ್ಕೆ ಸಹಪಂಕ್ತಿ ಭೋಜನ ಬೇಕು–ಬೇಡ ಎನ್ನುವ ಎರಡೂ ಕಡೆಯವರ ನಡುವೆ ಸೌಹಾರ್ದ ವಾತಾವರಣ ಅತ್ಯವಶ್ಯ.

ದೇವರ ದೃಷ್ಟಿಯಲ್ಲಿ ಭಕ್ತರೆಲ್ಲರೂ ಸಮ. ಬೇರೆಯವರಿಗಿಂತ ತಾವು ಹೆಚ್ಚು ಎಂದುಕೊಳ್ಳುವುದರಿಂದ ದೇವರನ್ನು ಕಡೆಗಣಿಸಿದಂತಾಗುವುದಿಲ್ಲವೆ? ಇದನ್ನರಿತು, ದೇವಸ್ಥಾನದ ಆಡಳಿತಸಮಿತಿಯವರು, ಸ್ಥಳೀಯ ಮಠಾಧೀಶರುಗಳು ಕೂಡಿ, ಭಕ್ತಜನರಲ್ಲಿ ಮುಕ್ತ ಮನಸ್ಸಿನ ಚರ್ಚೆ ನಡೆಸಿ, ಸೌಹಾರ್ದತೆಯನ್ನು ಕಾಯ್ದುಕೊಳ್ಳುವುದು ಶೋಭಿತರುದಂಥದು. ಈ ನಿಟ್ಟಿನಲ್ಲಿ ಬ್ರಾಹ್ಮಣರ ಪಾತ್ರ ಅತ್ಯಂತ ಹಿರಿದಾದೆ.

ಈ ವಿಚಾರದಲ್ಲಿ ಕಿಗ್ಗ ದೇವಸ್ಥಾನವು ದೇಶದ ಜಾತ್ಯತೀತತೆಯ ಪ್ರತೀಕವಾಗಿ ಒಂದು ಮೇಲ್ಪಂಕ್ತಿಯನ್ನು ಮೂಡಿಸಲೆಂದು ಆಶಿಸುತ್ತೇನೆ. ಇದಕ್ಕೆ ಜನಸಾಮಾನ್ಯರಲ್ಲಿ ತಾಳ್ಮೆ–ಚಿಂತನೆಗಳಿಂದ ಕೂಡಿದ ಕಾರ್ಯತತ್ಪರತೆ, ವಿಶಾಲ ಮನೋಭಾವ ಬೇಕಾಗುತ್ತವೆ.

ಎಲ್ಲರಲ್ಲಿ ಹರಿಯುವ ರಕ್ತ ಒಂದೇ. ಎಲ್ಲರೂ ಜೀವಿಸುವುದು ಪ್ರಕೃತಿಯ ಗಾಳಿ–ನೀರುಗಳಿಂದಲೇ. ಆದ್ದರಿಂದ ಇಂತಹ ದೈವಿಕ ಕಾರ್ಯಕ್ರಮಗಳಲ್ಲಿ ಸರ್ವರೂ ಸಹಕಾರ ಮನೋಭಾವದಿಂದ ಭಾಗವಹಿಸಿ, ಈ ಬಾಂಧವ್ಯವನ್ನು ಕೊನೆವರೆಗೂ ಉಳಿಸಿಕೊಂಡು ಹೋಗುವುದು ಶೃಂಗೇರಿ ಮತ್ತು ಸುತ್ತಮುತ್ತಲ ಜನತೆಯ ಕರ್ತವ್ಯ. ಹಿಂದೂ ಧರ್ಮ–ಸಂಸ್ಕೃತಿಯ ಮೂಲ ಸಿದ್ಧಾಂತಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯ.

—ಕೆ. ಎಂ. ಶೃಂಗೇಶ್ವರ.
ಹುಬ್ಬಳ್ಳಿ.

4. ಸ್ವಾಗತಾರ್ಹ ನಿಲುವು

ಮಾನ್ಯರೆ,

ಕಿಗ್ಗ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನದ ಕುರಿತು ಎದ್ದಿರುವ ವಿವಾದದ ಬಗ್ಗೆ ನನ್ನ ಅಭಿಪ್ರಾಯ ತಿಳಿಸುತ್ತಿದ್ದೇನೆ.

ಜಾತಿ ಮತಗಳೆಲ್ಲಾ ನಾವೇ ನಮ್ಮ ಹಿತಾಸಕ್ತಿಗಾಗಿ ಮಾಡಿಕೊಂಡ ವ್ಯವಸ್ಥೆಗಳೇ ಹೊರತು ಬೇರೇನಲ್ಲ. ಒಂದು ಬುದ್ಧಿವಂತ ವರ್ಗ ಬೇರೆ ವರ್ಗದವರನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ತನ್ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳಲು ಕೆಲವು ಅಸಂಬದ್ಧ ಸಂಪ್ರದಾಯದ ಕಟ್ಟುಪಾಡುಗಳನ್ನು ಮಾಡಿಕೊಂಡು "ಇವೆಲ್ಲದೈವ ನಿರ್ಮಿತವಾದವು" ಗಳೆಂದು ಪ್ರಚುರ ಪಡಿಸುತ್ತಿದೆ. ಆದರೆ ಇದು ನೂರಕ್ಕೆ ನೂರರಷ್ಟು ಸುಳ್ಳು. ದೇವರು ಧರ್ಮ ಎಲ್ಲರಿಗೂ ಒಂದೇ.

ಹಾಗಿರುವಾಗ ಸಹಪಂಕ್ತಿ ಭೋಜನ ಮಾಡುವುದರಿಂದ ತಪ್ಪೇನು? ಈ ಬಗ್ಗೆ ದೇವಸ್ಥಾನದ ಕನ್ವೀನರರ ಮತ್ತು ಅವರಂತೆಯೇ ಪ್ರತಿಪಾದಿಸುವ ಎಲ್ಲರ ವಾದ ತೀರಾ ಅಸಮರ್ಥನೀಯವಾದದ್ದು. "ದೇವಸ್ಥಾನದಲ್ಲಿ ಬ್ರಾಹ್ಮಣೇತರರಲ್ಲಿ ಎಲ್ಲರೂ ಸ್ನಾನ ಮಾಡಿ ಬಂದಿರುವುದಿಲ್ಲ" ಎಂದಿದ್ದಾರೆ. ಬ್ರಾಹ್ಮಣರೆಲ್ಲರೂ ಸ್ನಾನ ಮಾಡಿಕೊಂಡೇ ಬಂದಿರುತ್ತಾರೆಂದು ಇವರಿಗೆ ಹೇಗೆ ಗೊತ್ತು? ಅವರಲ್ಲೂ ಕೊಳಕಾಗಿರುವವರೂ ಇಲ್ಲವೇ? ಅಥವಾ ತನ್ನ ಆತ್ಮದಲ್ಲಿ ಒಂದಿಷ್ಟು ಕೊಳಕನ್ನಿಟ್ಟುಕೊಂಡು ಬರಿಯ ಹೊರಗೆ ಮಾತ್ರ ಸ್ನಾನ ಮಾಡಿ ಮಡಿಯಾಯಿತೆಂದು ಹೇಳಿದರೆ ಅದು ಸರಿಯೇ? ಹಾಗಾದರೆ ಇವರು ಬೇರೆ ಜಾತಿಯವರಿಂದ ವಂತಿಗೆಯನ್ನು ವಸೂಲು ಮಾಡಬೇಕೇಕೆ? ಶೂದ್ರರಿಂದ ತೆಗೆದುಕೊಂಡ ಹಣ ಶೂದ್ರವಾಗುವುದಿಲ್ಲವೇ?

ಹೀಗೆ ಸಾರ್ವಜನಿಕ ಸಮಾರಂಭಗಳಲ್ಲಿ ಜನರಲ್ಲಿ ಜಾತಿಯ ವಿಷಬೀಜ ಬಿತ್ತಿ ಒಡಕನ್ನುಂಟುಮಾಡುವವರು ಜಾತಿಯಲ್ಲಿ ಮೇಲಾದರೆ ನೀತಿಯಲ್ಲಿ ಮೇಲಾಗುವರೇ? ಇವರು ನಿಜಕ್ಕೂ ಸಮಾಜಘಾತುಕರಲ್ಲವೇ?

ಆದ್ದರಿಂದ ಕಿಗ್ಗದ ರುದ್ರಹೋಮದ ದಿನದಂದು ಸಹಪಂಕ್ತಿ ಭೋಜನಕ್ಕಾಗಿ ಒತ್ತಾಯಪಡಿಸಿರುವ ಕೆಲ ಮಂದಿ ಯುವಕರ ನಿಲುವು ನಿಜಕ್ಕೂ ಸ್ವಾಗತಾರ್ಹ ಹಾಗೂ ಅನುಕರಣೀಯ ಕೂಡ.

ಇವರ ಈ ಹೆಜ್ಜೆ ಉಳಿದವರಿಗೂ (ವಿದ್ಯಾವಂತರೆನಿಸಿಕೊಂಡವರಿಗಾದರೂ) ಮಾರ್ಗದರ್ಶಕವಾಗಲಿ.

—ಚಾವಲ್ಮನೆ ಸುರೇಶ್ ನಾಯಕ್,

ಪಂಕ್ತಿ ತಾರತಮ್ಯ ಅಧರ್ಮೀಯ

(2ನೇ ಪುಟದಿಂದ)

ಯಾವುದಾದರೂ ಸಾರ್ವಕಾಲಿಕ ಸತ್ಯವಿದ್ದರೆ ಅದು 'ಮಾನವೀಯತೆ' ಮಾತ್ರ. ಪ್ರಾಯಶಃ ಎಲ್ಲಾ ಧರ್ಮಗಳೂ ಸ್ವಲ್ಪ ಮಟ್ಟಿಗಾದರೂ ಇದನ್ನು ಬೋಧಿಸಿವೆ. ಆದರೆ ನಾವದನ್ನು ಮುಚ್ಚಿಹಾಕಿದ್ದೇವೆ.

ಈ ಎಲ್ಲಾ ಅಂಶಗಳ ಚಿಂತನ ಮಂಥನದಿಂದ ನಮಗೆ 'ಕಿಗ್ಗದ ಪ್ರಸಂಗ' ಎಷ್ಟು ಅಮಾನವೀಯ, ಅಧರ್ಮೀಯ ಎಂದು ಗೋಚರವಾಗುತ್ತದೆ. ಇನ್ನಾದರೂ ಈ ಕೃತಕ ಪೊಳ್ಳು ಮೇಲರಿಮೆ ತೊರೆದು ಮಾನವನನ್ನು ಮಾನವನನ್ನಾಗಿ ಪ್ರೀತಿಸುವ ಮನಸ್ಸು ಸಂಬಂಧಪಟ್ಟವರಿಗೆ ಬರಲಿ ಎಂದು ಆಶಿಸುತ್ತೇನೆ. ಮುಂದಿನ ಜನಾಂಗಕ್ಕಾದರೂ ಒಂದು ಸುವ್ಯವಸ್ಥಿತ, ಸರ್ವಸಮ್ಮತ, ಸಮಾಜ ರೂಪುಗೊಳಿಸಲು ನಾವಿಂದು ಈ ರೀತಿಯ ಗೊಡ್ಡು ಕಂದಾಚಾರಗಳನ್ನು ತಿಪ್ಪೆಗೆಸೆಯಬೇಕು. [ಕನಕದಾಸರ "ಕುಲ ಕುಲ ಕುಲವೆಂದು ಹೊಡೆದಾಡುತಿಹರಯ್ಯ...." ವಾಣಿಯನ್ನು ಅರ್ಥ ಮಾಡಿಕೊಳ್ಳೋಣ.]

ಮುಂದಿನ ರುದ್ರಹೋಮದಂದಾದರೂ 'ಮಾನವ ಮಾನವನೊಂದಿಗೆ ಕುಳಿತು ಊಟಮಾಡುವಂತೆ ಸಹ ಪಂಕ್ತಿ ಭೋಜನ ನಡೆಯಲೆಂದು ಆಶಿಸೋಣವೆ?

—ಎಸ್.ಕೆ. ಸುರೇಂದ್ರ,
ಅಂತಿಮ ಬಿಎಸ್ಸಿ,
—ಎಂ.ಕೆ. ಹರೀಶ ಕಡತೂರು,
ಅಂತಿಮ ಬಿ. ಕಾಂ.,
ಜೆ. ಸಿ. ಬಿ. ಎಂ. ಕಾಲೇಜ್, ಶೃಂಗೇರಿ

ಓದುಗರಲ್ಲಿ,

'ವೇದಿಕೆ' ಇರುವುದು ತಮ್ಮ ವಿಚಾರಗಳ ಮಂಡನೆ, ಸಮರ್ಥನೆ ಅಥವಾ ಪ್ರತಿಪಾದನೆಗೆ ಹಾಗೂ ತಪ್ಪು ವಿಚಾರಗಳನ್ನು ಅಲ್ಲಗಳೆಯುವುದಕ್ಕೆ. ಇಲ್ಲಿ ಟೀಕೆ ಅಥವಾ ಖಂಡನೆ ವಿಚಾರಗಳದ್ದಾಗಬೇಕೇ ಹೊರತು ವ್ಯಕ್ತಿಗಳದ್ದಲ್ಲ. ಹಲವಾರು ಅನುಭವಿಗಳು ಹೇಳಿರುವಂತೆ, ನಾವು ಇಲ್ಲವಾಗಿಸಬೇಕಾಗಿರುವುದು ತಪ್ಪು ವಿಚಾರಗಳನ್ನು ಮಾತ್ರ; ಆ ವಿಚಾರಗಳುಳ್ಳ ವ್ಯಕ್ತಿಗಳನಲ್ಲ. ಆದ್ದರಿಂದ ಎಲ್ಲ ಸಂಯಮಗಳಂತೆಯೇ 'ವೇದಿಕೆ'ಯಲ್ಲಿ ವೈಚಾರಿಕ ಸಂಯಮ ಕೂಡ ಅಗತ್ಯ.

ಸಹಭೋಜನದ ವಿಚಾರವನ್ನು 'ವೇದಿಕೆ'ಯಲ್ಲಿ ಬಹಳ ದಿನ ಮುಂದುವರಿಸಲು ಅಸಾಧ್ಯವಾಗಬಹುದು. ಆದ್ದರಿಂದ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಇಚ್ಛಿಸುವವರು ಆದಷ್ಟೂ ಏಪ್ರಿಲ್ 10ರೊಳಗೆ ಬರೆದು ಕಳಿಸಿ.

ಕನ್ವೀನರ್ ಬಹಿರಂಗ ಪಡಿಸಿದ ಅಸ್ಪೃಶ್ಯತೆ ಕುರಿತ ವಿಚಾರದ ಬಗೆಗೆ ಈವರೆಗೆ ಬರೆದ ಯಾರೂ ಗಮನ ಕೊಟ್ಟಂತಿಲ್ಲ. ಅದನ್ನೂ ವಿವೇಚಿಸಿ. ಹಾಗೆಯೇ, ದೇವಸ್ಥಾನದಲ್ಲಿ ನಡೆಯುವ ಉತ್ಸವಗಳ ನಿರ್ವಹಣೆ ಮತ್ತು ಹಣಕಾಸಿನ ಕುರಿತಂತೆ ಹಾಗೂ ಈ ಇಡೀ ಚರ್ಚೆ ಕುರಿತಂತೆ ಧರ್ಮದರ್ಶಿ ಮಂಡಳಿಯವರಲ್ಲಿರಬಹುದಾದ ವಿಚಾರಗಳನ್ನೂ ವ್ಯಕ್ತಪಡಿಸಲು ಕೋರಿಕೆ. —ಸಂಪಾದಕ

ಮಲೆನಾಡ ಕವಿ ಕೃಷ್ಣಪ್ಪಗೌಡ

(2ನೇ ಪುಟದಿಂದ)

ಇದೀಗ, ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಮಲೆನಾಡಿನ ಹಲವು ಮಿತ್ರರು ಸೇರಿ ಆರಂಭಿಸಿದ, 'ಮಲೆನಾಡು ಮಿತ್ರ ವೃಂದ'ವು ಈ ಬಾರಿ ಈ ಕವಿಯ ಬಗ್ಗೆ ಎಲ್ಲ ವಿಷಯಗಳನ್ನು ವಿಮರ್ಶಿಸಿದ್ದು, ಅವರ ಎಲ್ಲ ಕವನಗಳನ್ನು ಸಂಗ್ರಹಿಸಿ, 'ಹೂದುಂಬಿ' ಎಂಬ ಹೆಸರಿನಲ್ಲಿ ಪ್ರಕಟಗೊಳಿಸುವ ಬೃಹತ್ ಕಾರ್ಯವೊಂದನ್ನು ಕೈಗೆತ್ತಿಕೊಂಡಿದೆ. ಈಗ ಆ ಕವನಗಳು ಅಚ್ಚಾಗುತ್ತಿದ್ದು, ಇನ್ನು ಸ್ವಲ್ಪ ಸಮಯದಲ್ಲೆ ಮಲೆನಾಡಿನ ಹಾಗೂ ಕರ್ನಾಟಕದ ಜನತೆಯ ಕೈ ಸೇರುವ ನಿರೀಕ್ಷೆ ಇದೆ.

ಈಗ ಶೃಂಗೇರಿ ತಾ॥ ಕಿಗ್ಗದ ಬಳಿಯ ಹಳ್ಳಿಯೊಂದರಲ್ಲಿ ನೆಲೆಸಿ, ಮುಪ್ಪಿನ ಜೊತೆಗೆ ಕಾಯಿಲೆ, ಬಡತನಗಳಿಂದ ಹಣ್ಣಾಗಿರುವ ಶ್ರೀಯುತರು ತಮ್ಮ ಮುಪ್ಪಿನಲ್ಲಾದರೂ ತಾನು ಬರೆದ ಕವನಗಳು ಮಲೆನಾಡು ಮಿತ್ರ ವೃಂದ (ರಿ) ಬೆಂಗಳೂರು—ಇವರ ಸಹಾಯದಿಂದ, ಮಲೆನಾಡಿನ ಹಾಗೂ ಕರ್ನಾಟಕದ ಜನತೆಗೆ ತಲುಪಿತೆಂಬ ತೃಪ್ತಿ, ಹೆಮ್ಮೆ ಬರಬಹುದೆಂದು ನನ್ನ ನಂಬಿಕೆ.

ಮಲೆನಾಡು ಮಿತ್ರ ವೃಂದ ಮುಂದೆಯೂ ಕೂಡ ಮಲೆನಾಡಿನಲ್ಲಿ ಅಡಗಿ ಕುಳಿತಿರುವ ಇಂತಹ ಇನ್ನೂ ಹಲವಾರು ಸಾಹಿತಿಗಳ, ಕಲೆಗಾರರ, ಕಥೆಗಾರರ ಹಾಗು ಮಲೆನಾಡಿನ ಸಂಸ್ಕೃತಿಯ ಬಗ್ಗೆ ಕರ್ನಾಟಕದ ಜನತೆಗೆ ಪರಿಚಯ ಮಾಡಿಕೊಡುವುದೆಂದು ಆಶಿಸಿದ್ದೇನೆ.

ಎಸ್. ಎ. ನಾಗರಾಜ್,
ಬೆಂಗಳೂರು.

[ನಮ್ಮ 3–11–85ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಶ್ರೀಯುತ ಕೃಷ್ಣಪ್ಪ ಗೌಡರ ಕವನ "ಒಂದು ಪತ್ರ" ಓದುಗರ [illegible] ದಲ್ಲಿ ಇಂದೂ (ಎಂದೂ) ಹಸಿರಾ[illegible]
—ಸಂ.]

'ಮಲೆನಾಡು ಮಿತ್ರ ವೃಂದ'ದ ವಿಳಾಸ:
C/O ಶೃಂಗಾರ್ ಪ್ರಿಂಟರ್ಸ್, [illegible]
ಬೆಂಗಳೂರು–[illegible]

ಓದುಗರ ಪತ್ರ

ಗೋಮುಖವ್ಯಾಘ್ರ ಪುಡಾರಿಗಳ 'ಪರಿಚಯ'

ಮಾನ್ಯರೆ,

ನಿಮ್ಮ ಪತ್ರಿಕೆ ಜನತಾದವರ ಮುಖವಾಣಿ ಎಂದು ದೂರುತ್ತಿದ್ದವರಿಗೆ ನಿಮ್ಮ 9-3-86ರ ಸಂಚಿಕೆಯಲ್ಲಿನ ಜನತಾ ಪುಡಾರಿಯ ಕಳ್ಳನಾಟ ಪ್ರಕರಣದ ವರದಿ ಉತ್ತರ ಹೇಳಬಲ್ಲದು. ಯಾವುದೇ ರೀತಿಯ ದಾಕ್ಷಿಣ್ಯಕ್ಕೆ ಒಳಪಡದೆ, ಒಬ್ಬ ಖ್ಯಾತ ಪುಢಾರಿಯ ಒಳಗುಟ್ಟನ್ನು ನಿಷ್ಪಕ್ಷಪಾತವಾಗಿ ಬಯಲು ಮಾಡಿದ್ದೀರಿ. ಅಭಿನಂದನೆಗಳು.

ಮಿನಿ-ಸ್ಟರರ ಹಿಂಬಾಲಕರಾದ ಇಂಥ ಹಲವು 'ಮ್ಯಾಕ್ಸಿಸ್ಟರು'ಗಳು ಆಡಿದ್ದೇ ಆಟ ಎಂಬಂತಾಗಿದೆ. ಅವರ ತಪ್ಪನ್ನು ಯಾರಾದರೂ ಎದುರಿಸಿ ಕೇಳಿದರೆ, "ನಿಮಗೆಲ್ಲ ಪೋಲೀಸ್ನೋರಿಗೆ ಹೇಳಿ ವದಸ್ತೀನಿ, ನೋಡ್ತಿರಿ" ಎಂದು ಸರ್ವಾಧಿಕಾರ ಪ್ರದರ್ಶಿಸುತ್ತಾರೆ.

ಈಚೆಗೆ ಇಂಥವರೊಬ್ಬರು ವೃದ್ಧೆಯೊಬ್ಬರ ವಾರ್ಷಿಕ ಆದಾಯವನ್ನೆಲ್ಲ ತಮ್ಮ 'ಸಾಲ'ಕ್ಕೆಂದು ಬಲಾತ್ಕಾರವಾಗಿ ವಶಪಡಿಸಿಕೊಂಡು ಆಕೆ ವರ್ಷವಿಡೀ ನರಳುವಂತೆ ಮಾಡಿದ್ದಾರೆ. ಜೊತೆಗೆ, "ನಾನು ನಿನ್ನೆಯೆ ಹೋಗಿ ಎಸ್ಸೈ ಹತ್ತಿರ ಮಾತಾಡಿದ್ದೇನೆ. ನೀವೆಲ್ಲಾದರೂ ಪೋಲೀಸ್ ಕಂಪ್ಲೆಂಟ್ ಕೊಟ್ಟರೆ ನಾನು ಈ ಕೆಲಸವನ್ನೇ ಮಾಡಿಲ್ಲ ಅನಿಸ್ತೀನಿ" ಎಂದು ಹೆದರಿಸಿದ್ದಾರೆ. ಈ ಮಾತು ಕೇಳುವಾಗ, ಇವರ ಮಾತಿಗೆ ಮಾನ್ಯತೆ ನೀಡುವ ಅಧಿಕಾರಿಗಳು ಅಸಹಾಯಕರಿಗೆ ಎಷ್ಟರಮಟ್ಟಿಗೆ ನೆರವಾದಾರು ಎನ್ನಿಸುತ್ತದೆ. ಈ ಪುಡಾರಿಗೆ ಇಂದೂ ಕೂಡ ಗೇಣಿಯ ಒಕ್ಕಲುಗಳಿದ್ದಾರೆ!

ಇನ್ನೊಬ್ಬ ಖ್ಯಾತ ಪುಡಾರಿ: ಹಿಂದೆ ಕೇಂದ್ರಾಡಳಿತ ಪಕ್ಷದ ಮುಖಂಡರೊಬ್ಬರು ಕೊಪ್ಪಕ್ಕೆ ಬಂದಾಗ ನಾಲ್ಕು ಜನರಿಗೆ "ಅರ್ಧರ್ಧ ಹಾಕಿಸಿ" ಸಭೆಗೆ ಅಡ್ಡಿ ಮಾಡಲು ಹೇಳಿದರು. ಯಾವುದೇ ಗಲಾಟೆಯೇನೋ ಆಗಲಿಲ್ಲವೆನ್ನಿ. ಆದರೆ ಇಂಥ ಸೋ-ಕಾಲ್ಡ್ ಗಣ್ಯರು ಮುಗ್ಧರನ್ನು ತಪ್ಪು ದಾರಿಗೆಳೆದು ಬಲಿಪಶು ಮಾಡುವುದು ಕಂಡಾಗ ಅವರ ಮೇಲೆ ಉಗಿಯಬೇಕೆನ್ನಿಸಿದರೂ ಪೋಲೀಸ್ ಆತಿಥ್ಯದ ಬಗ್ಗೆ ಕೇಳಿ ಬಲ್ಲವನಾದ್ದರಿಂದ ತೆಪ್ಪಗಾಗಬೇಕಾಯಿತು.

ಇಂಥ ಪುಡಾರಿಗಳು, ಚಂದ್ರನ್‌ನಂಥ ಭಾರೀ ಡಕಾಯಿತರಿಗೆ ಆಶ್ರಯ ಕೊಡುವ ಕಾರ್ಯಕರ್ತರು ಇರುವಾಗ ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಸರಿಯಾದ ರೀತಿಯಲ್ಲಿ ಜಾರಿಗೆ ಬರಬಹುದು?

ಇವರ ಇಂಥ ದುಷ್ಕೃತ್ಯಗಳನ್ನು ಎದುರಿಸಹೋದವರು ಸಮಾಜದ ಕಣ್ಣಲ್ಲಿ 'ರೌಡಿಗಳು, ಪೋಲಿಗಳು, ತರಲೆಗಳು' ಆಗುತ್ತಾರೆ ಆದ್ದರಿಂದ ಪತ್ರಕರ್ತರು ಇಂಥವರನ್ನು ಶೋಧಿಸಿ ಅವರ ಮಹತ್ಕಾರ್ಯಗಳನ್ನು ಪ್ರಕಟಿಸಿದಲ್ಲಿ ಹಿಂದೆ ಹೇಳಿದಂಥ ಗೋಮುಖ ವ್ಯಾಘ್ರಗಳನ್ನು ಜನರಿಗೆ ಪರಿಚಯಿಸಿದಂತಾಗುವುದಲ್ಲದೆ, ಸಚಿವರಿಗೂ ಗೊತ್ತಾದೀತು ತನ್ನನ್ನು ಎಂತೆಂತಹವರೆಲ್ಲ ಸುತ್ತುವರಿದಿದ್ದಾರೆಂದು.

—ಟಿ.ಪಿ.ಶ್ರೀನಾಥ್. ಹೆಗ್ಗಾರು.

ಏ. 25ರಂದು ಕೊಪ್ಪದಲ್ಲಿ ಅರಣ್ಯ ನೆಡು ತೋಪು ಕಾವಲುಗಾರರ ಧರಣಿ

ಕೊಪ್ಪ: "ಸಮಾನ ಕೆಲಸಕ್ಕೆ ಸಮಾನ ವೇತನ", ಸಮವಸ್ತ್ರ, ಕೆಲಸದಲ್ಲಿ ಕೆಲಸದಲ್ಲಿ ಖಾಯಂಗೊಳಿಸುವಿಕೆ ಮುಂತಾದ ಬೇಡಿಕೆಗಳ ಬಗ್ಗೆ ಒತ್ತಾಯಿಸಲು ಅರಣ್ಯ ನೆಡು ತೋಪು ಕಾವಲುಗಾರರ ಜಿಲ್ಲಾ ಸಂಘದ (ಎ. ಐ. ಟಿ. ಯು. ಸಿ.) ನೇತೃತ್ವದಲ್ಲಿ ಕೊಪ್ಪ ಅರಣ್ಯ ವಿಭಾಗದ ಸದರಿ ಕಾರ್ಮಿಕರು ಏ 25ರಂದು ಕೊಪ್ಪದ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯೆದುರು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಲಿದ್ದಾರೆಂದು ಎ. ಐ. ಟಿ. ಯು. ಸಿ. ಕಾರ್ಯಕರ್ತ ಎನ್. ಆರ್.ರಾಮಚಂದ್ರ ತಿಳಿಸಿದ್ದಾರೆ.

ಮೇಲುಬೆಳ್ಳಿ ರಸ್ತೆಗೆ 1 ಕಿ.ಮೀ.ಟಾರು ಮಂಜೂರು

ಕೊಪ್ಪ: ಹರಿಹರಪುರದಿಂದ ಮೇಲುಬೆಳ್ಳಿಗೆ ಹೋಗುವ ಲೋಕೋಪಯೋಗಿ ಇಲಾಖೆ ರಸ್ತೆಗೆ 1 ಕಿ. ಮೀ. ದೂರಕ್ಕೆ ಟಾರು ಮಂಜೂರಾಗಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಚಿನ್ನಪ್ಪ ಹೆಗ್ಡೆ 'ಮುಂಜಾವು'ಗೆ ತಿಳಿಸಿದ್ದಾರೆ.

ಈ ರಸ್ತೆಯಲ್ಲಿ ಬಸ್ ಓಡಾಡುವಂತಾಗಲು ಒಂದು ದೊಡ್ಡ ಏರು ಅಡ್ಡಿಯಾಗಿದ್ದು ಅದನ್ನು ತಪ್ಪಿಸಿ, ರಸ್ತೆಯನ್ನು ಬೇರೆ ಕಡೆಯಿಂದ ಹೊಸದಾಗಿ ನಿರ್ಮಿಸಬೇಕಾಗುತ್ತದೆ. ಇದಕ್ಕೆ ಕನಿಷ್ಠ 20 ಸಾವಿರ ರೂ. ಬೇಕಾಗುತ್ತದೆ ಎಂದ ಅವರು, ಸದ್ಯದ ಪರಿಸ್ಥಿತಿಯಲ್ಲಿ ಇಷ್ಟು ದೊಡ್ಡ ಮೊತ್ತ ಮಂಜೂರಾಗುವ ಬಗ್ಗೆ ಶಂಕೆ ವ್ಯಕ್ತಪಡಿಸಿದರು.

ಬಿದಿರುಡಿಗೆ ಬೆಂಕಿ: ಗುಡಿಸಲುಗಳ ಪಾರು

ಕೊಪ್ಪ: ಏ. 1ರಂದು ಮಧ್ಯಾಹ್ನ 3 ಗಂಟೆಯ ಉರಿಬಿಸಿಲಿನಲ್ಲಿ, ಶೃಂಗೇರಿ ರಸ್ತೆಯ ಸಾಮಿಲ್ ಬಳಿಯಿರುವ ಬಡವರ ಮನೆಗಳ ಮಧ್ಯೆಯಿದ್ದ ಒಣಗಿದ ಬಿದಿರು ಉಡಿಗೆ ಬೆಂಕಿ ಹತ್ತಿಕೊಂಡು ಧಗ ಧಗಿಸಿ ಉರಿಯತೊಡಗಿತು. ಅಲ್ಲಿನ ನಿವಾಸಿಗಳಲ್ಲಿ ಬಹಳಷ್ಟು ಜನ ಕೆಲಸಕ್ಕೆ ಹೋಗಿದ್ದು, ಮನೆಗಳ ಬಳಿಯಿದ್ದ ಕೆಲವೇ ಜನರು, ಮಹಿಳೆಯರು ಸೇರಿ ಬೆಂಕಿ ಸುತ್ತ ಮುತ್ತಲ ಹುಲ್ಲಿನ ಮನೆಗಳಿಗೆ ತಗುಲದಂತೆ ಹೆಣಗುತ್ತಿದ್ದರು.

ಆ ಸಮಯದಲ್ಲಿ ತಮ್ಮ ಗೆಳೆಯರೊಂದಿಗೆ ಶೃಂಗೇರಿಯಿಂದ ಮೋಟಾರ್ ಸೈಕಲ್ಲಿನಲ್ಲಿ ಬರುತ್ತಿದ್ದ 'ಮುಂಜಾವು' ಸಂಪಾದಕರು ಬೈಕ್ ನಿಲ್ಲಿಸಿ, ಗೆಳೆಯರನ್ನು ಅಲ್ಲಿನವರ ನೆರವಿಗೆ ಬಿಟ್ಟು ಪೋಲೀಸರಿಗೂ, ಅರಣ್ಯಾಧಿಕಾರಿಗಳಿಗೂ ತಿಳಿಸಲು ಧಾವಿಸಿದರು. ದಾರಿಯಲ್ಲಿ ಕಟ್ಟಡ ಕೆಲಸದಲ್ಲಿ ನಿರತರಾಗಿದ್ದ ಕಂಟ್ರಾಕ್ಟರ್ ಗೋಪುಶೆಟ್ಟರ ಜನಗಳಿಗೂ, ರೈಸ್ ಮಿಲ್ ಸಮೀಪದ ಮನೆಗಳವರಿಗೂ ಬೆಂಕಿ ಬಿದ್ದಲ್ಲಿಗೆ ಹೋಗಲು ಮನವಿ ಮಾಡಿದರು.

ವಿಷಯ ತಿಳಿದ ಅರಣ್ಯ ಇಲಾಖೆಯವರು ಇದ್ದಬದ್ದ ಸಿಬ್ಬಂದಿಗಳನ್ನೆಲ್ಲ ಒಟ್ಟುಗೂಡಿಸಿಕೊಂಡು 2 ಜೀಪುಗಳಲ್ಲಿ ಸ್ಥಳಕ್ಕೆ ಧಾವಿಸಿದರು. ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ದುರ್ಗಯ್ಯನವರೂ ಬಂದರು. ಅಷ್ಟರಲ್ಲಿ ಬೆಂಕಿ ಸುಮಾರಾಗಿ ಹತೋಟಿಗೆ ಬಂದಿದ್ದು, ನಂತರ ಪೂರ್ಣ ಹತೋಟಿಗೆ ತರಲಾಯಿತು.

ಬೆಂಕಿಗೆ ಕಾರಣ ಗೊತ್ತಾಗಿಲ್ಲ. ಒತ್ತೊತ್ತಾಗಿ ಹತ್ತಾರು ಹುಲ್ಲಿನ ಮನೆಗಳೇ ಇದ್ದು, ಆ ಉರಿ ಬಿಸಿಲಿನ ವೇಳೆಯಲ್ಲಿ ಒಂದು ಮನೆಗೆ ಬೆಂಕಿ ತಗುಲಿದ್ದರೂ ಇಡೀ ಪ್ರದೇಶ ಬೂದಿಯಾಗುತ್ತಿತ್ತು. ಇಂಥದೊಂದು ದುರಂತ ಯಾವುದೇ ನಷ್ಟವಿಲ್ಲದೆ ಸ್ವಲ್ಪದರಲ್ಲಿ ತಪ್ಪಿತು

ಕೆಟ್ಟುಹೋದ ಬೋರ್‌ವೆಲ್

ಆಗಳಗಂಡಿ: ಇಲ್ಲಿನ ಮೇಲಿನಪೇಟೆಯ ಬೋರ್‌ವೆಲ್ಲು ಕೆಟ್ಟುಹೋಗಿದ್ದು, ಅದನ್ನು ರಿಪೇರಿ ಮಾಡಲೆಂದು ಬಂದಿದ್ದ ಲಾರಿಯವರು ಸರಿಯಿದ್ದ ಇನ್ನೊಂದು ಬೋರ್‌ವೆಲ್ಲನ್ನೂ ಕೆಡಿಸಿದ್ದಾರೆ. ಈ ಬಗ್ಗೆ ಅವರನ್ನು ಕೇಳಿದ್ದಕ್ಕೆ ರಿಪೇರಿಗೆ ಅರ್ಜಿ ಕೊಡಲು ತಿಳಿಸಿದ್ದಾರಂತೆ!

ಸಂಬಂಧಪಟ್ಟವರು ತಕ್ಷಣ ರಿಪೇರಿಗೆ ಕ್ರಮಕೈಗೊಳ್ಳಲೆಂದು ಒತ್ತಾಯಿಸಿದ್ದಾರೆ— ಈ ಬೆಟ್ಟ ಬೇಸಿಗೆಯಲ್ಲಿ 2 ಬೋರ್‌ವೆಲ್‌ಗಳಿದ್ದೂ ಕುಡಿಯಲು ನೀರಿಲ್ಲವಾದ ಜನತೆ.

(ವರದಿ: ಎಂ. ವಿ. ಗಂಗಾಧರ್.)

ಅಕ್ರಮ ನಾಟಾದ ಮೇಲೆ ವ್ಯಾಪಕ ದಾಳಿ

ಕೊಪ್ಪ: ಇಲ್ಲಿನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ . ವ್ಯಾಪ್ತಿಯೊಳಗೆ ಬರುವ ಅರಣ್ಯ ತನಿಖಾ ದಳದ ರೇಂಜರ್ ಆಗಿ ಹೊಸದಾಗಿ ಬಂದಿರುವ ಶ್ರೀನಿವಾಸ ರಾವ್ ಅವರು ಈಚೆಗೆ ಕೊಪ್ಪದ ಕಂಟ್ರಾಕ್ಟರ್ ಮಂಜಪ್ಪ ನಾಯ್ಕ್ (ತಮ್ಮೇ ನಾಯ್ಕ್) ಅವರ ಮನೆಯಲ್ಲಿ ತಪಾಸಣೆ ನಡೆಸಿ, 2 ಲಾರಿ ಲೋಡು ವಿವಿಧ ಜಾತಿಯ ನಾಟಾಗಳನ್ನು ವಶಪಡಿಸಿಕೊಂಡಿದ್ದು, ಜುಲ್ಮಾನೆಗಾಗಿ 20 ಸಾವಿರ ರೂ.ಗಳನ್ನು ಠೇವಣಿ ಇರಿಸಿಕೊಳ್ಳಲಾಗಿದೆಯೆಂದು ಗೊತ್ತಾಗಿದೆ. ಇವನ್ನು ತಮ್ಮ ಹಿಡುವಳಿಯ ವ್ಯಾಪ್ತಿಯಲ್ಲೇ ಕೊಯ್ದಿರುವುದಾಗಿ ಅವರು ಹೇಳಿದ್ದಾರೆನ್ನಲಾಗಿದ್ದು ಹೆಚ್ಚಿನ ತನಿಖೆ ನಡೆಯುತ್ತಿದೆ.

ಬಸರಿಕಟ್ಟೆ ಬಳಿಯ ಮೇರ್ತಿಖಾನ್ ಎಸ್ಟೇಟಿನಲ್ಲಿ 4 ಲೋಡು ಸಿಲ್ವರ್ ಮರದ ನಾಟಾ ವಶಪಡಿಸಿಕೊಳ್ಳಲಾಗಿದೆ. ಇದೂ ಸಹ ಸ್ವಂತ ಹಿಡುವಳಿಯದೆಂದು ಅವರು ತಿಳಿಸಿದ್ದರೂ ಒತ್ತುವರಿ ಸರ್ಕಾರಿ ಭೂಮಿಯಿಂದ ಕಡಿದಿರುವುದಾಗಿ ನಂಬಲಾಗಿದ್ದು ಒತ್ತುವರಿಯ ಪ್ರಮಾಣ ಅರಿಯಲು ಸರ್ವೆ ನಡೆಸಲಾಗಿದೆ.

ಬೇಳೆಗದ್ದೆಯ ಬಿ.ಜಿ. ಚಿದಂಬರ್‌ರವರ ಮನೆಗೆ 4 ಟ್ರಕ್ ಲೋಡು ನಾಟಾ ಬಂದಿದೆಯೆಂಬ ದೂರಿನ ಮೇಲೆ ಶೋಧನೆ ನಡೆಸಲಾಯಿತಾದರೂ ಯಾವುದೇ ಅಕ್ರಮ ಸಂಗ್ರಹ ಕಂಡುಬರಲಿಲ್ಲ ಎಂದು ಡಿಎಫ್‌ಓ 'ಮುಂಜಾವು'ಗೆ ತಿಳಿಸಿದರು.

ಶಿವಮೊಗ್ಗ ವ್ಯ. ಮಾ. ಸಮಿತಿಯಿಂದ

ಬರ ಪರಿಹಾರ ನಿಧಿಗೆ 5ಲಕ್ಷ ರೂ ದೇಣಿಗೆ

ಶಿವಮೊಗ್ಗ: ರಾಜ್ಯದ ಸಹಕಾರ ಮತ್ತು ನಿಯಂತ್ರಿತ ಮಾರುಕಟ್ಟೆ ಸಚಿವರಾದ ಆರ್ ಎಲ್. ಜಾಲಪ್ಪನವರು ಮಾ. 28ರಂದು ಸಮಿತಿಯ ಪ್ರಾಂಗಣಕ್ಕೆ ಭೇಟಿ ನೀಡಿ ಸಮಿತಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲಿಸಿದರಲ್ಲದೆ, ಸಮಿತಿಯು ರೈತ ಬೆಳೆಗಾರರಿಗೆ ವಾಹನ ಸೌಲಭ್ಯ ಒದಗಿಸಿದ ಬಗ್ಗೆ, ಕೇಂದ್ರೀಕೃತ ಟೆಂಡರ್ ಪದ್ಧತಿ ಜಾರಿಗೊಳಿಸಿದ ಬಗ್ಗೆ ಮತ್ತು ಭತ್ತ ಒಣಗಿಸುವ ಯಂತ್ರಗಳ ಸ್ಥಾಪನೆ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಸಮಿತಿಯಲ್ಲಿ ಗಣಕ ಯಂತ್ರವನ್ನು ಸ್ಥಾಪಿಸಲು ಸರ್ಕಾರದ ಶೀಘ್ರ ಮಂಜೂರಾತಿ ದೊರಕಿಸಿ ಕೊಡುವ ಭರವಸೆ ನೀಡಿದರಲ್ಲದೆ ಇನ್ನಿತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೀವ್ರಗತಿಯಲ್ಲಿ ಕೈಗೊಳ್ಳುವಲ್ಲಿ ಸರ್ಕಾರದ ಎಲ್ಲ ರೀತಿಯ ನೆರವನ್ನು ದೊರಕಿಸಿಕೊಡುವ ಆಶ್ವಾಸನೆ ಇತ್ತರು.

ಇದೇ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಬರ ಪರಿಹಾರ ನಿಧಿಗೆ ಸಮಿತಿ ಪರವಾಗಿ 5 ಲಕ್ಷ ರೂಪಾಯಿಗಳ ಚೆಕ್ ಒಂದನ್ನು ಸಮಿತಿಯ ಅಧ್ಯಕ್ಷರಾದ ಕೆ. ಎಸ್. ವೀರಪ್ಪಗೌಡರು ಸಚಿವರಿಗೆ ನೀಡಿದರು. ಈ ವಂತಿಗೆಗಾಗಿ ಸಚಿವರು ಸಮಿತಿಯನ್ನು ಹಾರ್ದಿಕವಾಗಿ ಅಭಿನಂದಿಸಿದರು.

ಕೊಪ್ಪ ಠಾಣೆಯಲ್ಲಿ ಹೊಡೆದಾಟ

(ಮೊದಲ ಪುಟದಿಂದ)

ಈ ವಿಚಾರಗಳನ್ನೆಲ್ಲ 'ಮುಂಜಾವು' ಎಸ್ಪಿಯವರನ್ನು ಠಾಣೆಯಲ್ಲಿ ಭೇಟಿ ಮಾಡಿ ಅವರ ಗಮನಕ್ಕೆ ತಂದಿದೆ.

ಚರ್ಚೆ

ಸರ್ಕಲ್ ಇನ್‌ಸ್ಪೆಕ್ಟರ್ ಒಬ್ಬ ಆರೋಪಿಯನ್ನು ಹಾರಿಸಿಕೊಂಡು ಹೋದುದೇಕೆ ಎಂಬುದಕ್ಕಿಂತ ಹೆಚ್ಚಾಗಿ, ಸಬ್ ಇನ್‌ಸ್ಪೆಕ್ಟರು ಹಾಗೆ ಬೆನ್ನು ಹತ್ತಿ ಹೋಗಿ ಗಲಾಟೆಗೆ ಅವಕಾಶ ಮಾಡುವ ಬದಲು ಮೇಲಧಿಕಾರಿಗಳಿಗೆ ತಿಳಿಸಿ ತಮ್ಮ ಕ್ಷೇಮ ಕಾದುಕೊಳ್ಳಬಹುದಿತ್ತು ಎಂಬ ಚರ್ಚೆ ಕೂಡ ಅಲ್ಲಲ್ಲಿ ಕೇಳಿಬರುತ್ತಿದೆ. ಇದಕ್ಕೆ ಉತ್ತರವೂ ಅಲ್ಲಲ್ಲೇ ಹೊರಬರುತ್ತಿದೆ.

ಒಟ್ಟಿನಲ್ಲಿ, ಪೋಲೀಸ್ ಇಲಾಖೆಯ ಮಾನ ಇಷ್ಟು 'ಚೀಪ್' ಆಗಿ ಬೀದಿಗೆ ಬರಬಾರದಿತ್ತು ಎಂಬ ಬಗ್ಗೆ ಮಾತ್ರ ಎಲ್ಲೂ ಭಿನ್ನಾಭಿಪ್ರಾಯವಿಲ್ಲ. ಠಾಣೆಗೇ. ಕವಲು ಕವಲಾಗಿ ಹಬ್ಬಿ ಹೋಗುತ್ತಿರುವ ಸುಳ್ಳಿನ ಕಂತೆಗಳಿಗೂ ಅಡೆತಡೆಯಿಲ್ಲವಾಗಿದೆ.

ಈ ವರದಿಯಲ್ಲಿ ಬಹಳ ವ್ಯಾಪಕವಾಗಿ ಸಂಗ್ರಹಿಸಿದ ಅಭಿಪ್ರಾಯಗಳನ್ನು, ಬಹಳ ವಿಶ್ವಾಸಾರ್ಹವೆನ್ನಿಸಿದ ಮೂಲಗಳಿಂದ ದೊರೆತ ಮಾಹಿತಿಗಳನ್ನು ಓದುಗರ ಮುಂದಿಟ್ಟಿದೆ. ಯಾರು ಯಾರು ಎಷ್ಟೆಷ್ಟು ಎಂಬುದನ್ನು ತೀರ್ಮಾನಿಸುವವರು. ತೀರ್ಮಾನಿಸಬೇಕಾದವರೂ ಜನತೆಯೇ. ಅವರ ವಿವೇಚನೆಗೆ ಸಾಮಗ್ರಿ ಒದಗಿಸುವುದು [illegible] ಈ ವರದಿಯ ಉದ್ದೇಶ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು: ಜೀವಟಿಗೆ ಅಚ್ಚು ಕೂಟ, ಕೊಪ್ಪ.